# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ.342/2018

ಫಿರ್ಯಾದುದಾರರು : M/S Core Green Sugar and Fuel Private Limite.

**ವಿರುದ್ಧ**

ಆಪಾದಿತ : ಶ್ರೀ ಭೀಮನಗೌಡ ಬಸವಂತ್ರಾಯ ಕನ್ನೊಳ್ಳಿ ತಂದೆ ಬಸವಂತ್ರಾಯ ಕನ್ನೊಳ್ಳಿ.

**ಆ ಪಾ ದ ನೆ**

**ಶ್ರೀ ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.**

ಅಪಾಧಿತನಾದ ನೀವು ದೂರುದಾರ ಮೇ: ಕೋರ್ ಗ್ರೀನ್ ಶುಗರ್ ಕಂಪನಿಯೊಂದಿಗೆ 2016-17 ರ ಸಾಲಿನ ರೈತರ ಜಮೀನುಗಳಿಂದ ಕಬ್ಬಿನ ಬೆಳೆಯನ್ನು ಕಟಾವು ಮಾಡಿಸಿ ದೂರುದಾರ ಫ್ಯಾಕ್ಟರಿಗೆ ಸಾಗಾಟ ಮಾಡಿಸಲು ಒಪ್ಪಿಕೊಂಡು ದಿನಾಂಕ 09.08.2016 ರಂದು ಕಾರಾರು ಮಾಡಿಕೊಂಡು ರೂ.3,50,000/- ಮುಂಗಡ ಹಣವನ್ನು ಪಡೆದುಕೊಂಡಿರುತ್ತೀರಿ. ನಂತರ ನೀವು ಕೇವಲ ರೂ.27,139/- ಮೊತ್ತದ ಕೆಲಸ ನಿರ್ವಹಿಸಿದ್ದು ಬಾಕಿ ಮೊತ್ತ ರೂ.3,22,861/- ಹಾಗೂ ಬಡ್ಡಿ ಸೇರಿ ಒಟ್ಟು ರೂ 3,98,331/- ಹಣದ ಮರುಪಾವತಿಗಾಗಿ ದೂರುದಾರರಿಗೆ ನೀವು 30.01.2018 ರಂದು ನೀವು ಖಾತೆ ಹೊಂದಿರುವ ಯ ುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಿಂದಗಿ ಶಾಖೆಗೆ ಸೇರಿದ 039108 ಸಂಖ್ಯೆಯ ಚೆಕ್ ನಲ್ಲಿ ರೂ.3,98,331/-ಹಾಗೂ ದಿನಾಂಕ 30.01.2018 ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದೀರಿ. ಸದರಿ ಚೆಕ್ನ್ನು ಪಿರ್ಯಾದುದಾರರು ದಿನಾಂಕ 09.02.2018 ರಂದು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಇಂಡಿಯಾನ್ ಬ್ಯಾಂಕ್ ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ, "ಸಾಕಷ್ಟು ಹಣ ಇಲ್ಲ" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ 09.02.2018 ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ 07.03.2018

ರಂದು ಆಪಾದಿತರಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ 10.03.2018 ರಂದು ಜಾರಿಯಾಗಿರುತ್ತದೆ. ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್ ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ.138ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ದಿನಾಂಕಃ 02.12.2025.
ಸ್ಥಳಃ ಯಾದಗಿರ

ಪ್ರಧಾನ ದಿವಾಣಿ ನ್ಯಾಯಾಧಿಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಯಾದಗಿರಿ.